ಸರ್ಕಾರದ ವತಿಯಿಂದ ಏನೊಂದು nominal ಹಣ ಕೊಡಬಹುದೋ, ಅದನ್ನೂ ಸಹ ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ. ಅವರು ಪೂರ್ತಿ ಜಾಗವನ್ನು ಕೊಟ್ಟರೆ, ಒಳ್ಳೆಯ ಬಸ್ ನಿಲ್ದಾಣವನ್ನು ಕಟ್ಟುವುದಕ್ಕೆ ನಮಗೇನೂ ಹಣದ ಕೊರತೆ ಇಲ್ಲ. ನಾವು ಕೊಡುವುದಕ್ಕೆ ರೆಡಿ ಇದ್ದೇನೆ. ಜಾಗವನ್ನು ಹಸ್ತಾಂತರಿಸಲು ಈಗಾಗಲೇ 2–3 ಸಾರಿ ಪತ್ರ ವ್ಯವಹಾರವಾಗಿದೆ. ಜಾಗವನ್ನು ಮಾರ್ಕ್ ಮಾಡಿ, ಪ್ಲಾನ್ ಎಲ್ಲಾ ಮಾಡಲಾಗಿದೆ. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಇಲ್ಲೇ ಇದ್ದಾರೆ. ಜಾಗ ಶೀಘ್ರ ಹಸ್ತಾಂತರವಾದ ತಕ್ಷಣ ನಾನು ಬಸ್ ನಿಲ್ದಾಣ ಕಟ್ಟಿಸಿಕೊಡುತ್ತೇವೆ. ಮಾನ್ಯ ರುದ್ರೇಶ್ ಗೌಡರವರೆ, ಮೊನ್ನೆ ತಾನೇ ತಮಗೆ ಡಿಪೋವೊಂದನ್ನು ಮಂಜೂರು ಮಾಡಿದ್ದೇವೆ. ಇದು ತಮ್ಮ ಎರಡನೆಯ ಬೇಡಿಕೆಯಾಗಿದೆ. ಇದನ್ನೂ ಈಡೇರಿಸಲು ನಾವು ರೆಡಿಯಾಗಿದ್ದೇವೆ. ನಿಮ್ಮ ಕ್ಷೇತ್ರಕ್ಕೆ ಒಳ್ಳೆಯದಾಗಲಿ, ಅಲ್ಲಿಯ ಜನರಿಗೆ ಒಳ್ಳೆಯದಾಗಲಿ ಎಂಬ ದೃಷ್ಟಿಯಿಂದ ಇದನ್ನೂ ಮಾಡುವುದಕ್ಕೆ ನಾವು ತಯಾರಿದ್ದೇವೆ. ಅವರೊಂದಿಗೆ ಪತ್ರ ವ್ಯವಹಾರ ಮಾಡಿ, ಆದಷ್ಟು ಶೀಘ್ರವಾಗಿ ಇದನ್ನು ಮಾಡಿಕೊಡುತ್ತೇವೆ.

ಶ್ರೀ ವೈ.ಎನ್. ರುದ್ರೇಶ್‌ಗೌಡ : ಆಯಿತು, ದಯಮಾಡಿ ಇದನ್ನು ಮಾಡಿ.

ಭಾಗ್ಯಲಕ್ಷ್ಮಿ ಫಲಾನುಭವಿಗಳು

120 (707) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ತಾಲ್ಲೂಕಿನಲ್ಲಿ 2008–09 ರಿಂದ ಈ ತನಕ ಎಷ್ಟು ಜನ ಭಾಗ್ಯಲಕ್ಷ್ಮಿ ಫಲಾನುಭವಿಗಳಿಗೆ ಬಾಂಡ್ ವಿತರಿಸಲಾಗಿದೆ. (ವರ್ಷವಾರು ಮಾಹಿತಿ ನೀಡುವುದು);

ಆ) ಭಾಗ್ಯಲಕ್ಷ್ಮಿ ಬಾಂಡ್ ವಿತರಣೆಗೆ ಬಾಕಿ ಇರುವ ಫಲಾನುಭವಿಗಳು ಎಷ್ಟು (ವರ್ಷವಾರು ಮಾಹಿತಿ ನೀಡುವುದು);

ಇ) ಭಾಗ್ಯಲಕ್ಷ್ಮಿ ಬಾಂಡ್ ವಿತರಣೆಗೆ ಬಾಕಿ ಉಳಿಸಿಕೊಳ್ಳಲು ಕಾರಣವೇನು; ಎಷ್ಟು ದಿವಸಗಳೊಳಗೆ ಬಾಕಿ ಉಳಿದ ಭಾಗ್ಯಲಕ್ಷ್ಮಿ ಫಲಾನುಭವಿಗಳಿಗೆ ಬಾಂಡ್ ವಿತರಿಸಲಾಗುವುದು?

ಶ್ರೀ ಸಿ.ಸಿ. ಪಾಟೀಲ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) : ಅ) ವರ್ಷಾವಾರು ವಿವರ ಕೆಳಕಂಡಂತಿದೆ.

ವರ್ಷ	ವಿತರಿಸಲಾದ ಬಾಂಡ್‌ಗಳ ಸಂಖ್ಯೆ
2008–09	543
2009–10	418
2010–11	–
2011–12	–
ಒಟ್ಟು	**961**

ಆ) ತೀರ್ಥಹಳ್ಳಿ ತಾಲ್ಲೂಕಿನ ವರ್ಷಾವಾರು ವಿವರ ಕೆಳಕಂಡಂತಿದೆ.

ವರ್ಷ	ಬಾಂಡ್ ವಿತರಣೆಗೆ ಬಾಕಿಯಿರುವ ಅರ್ಜಿಗಳ ಸಂಖ್ಯೆ	ಷರಾ
2008–09	–	–
2009–10	145	
2010–11	480	–
ಒಟ್ಟು	**625**	**ಬಾಕಿ ಬಾಂಡುಗಳು**

ಇ) ಆಯವ್ಯಯದ ಲಭ್ಯತೆಗನುಗುಣವಾಗಿ ಬಾಕಿ ಇರುವ ಬಾಂಡ್ ಗಳನ್ನು ವಿತರಣೆ ಮಾಡಲು ಕ್ರಮವಹಿಸಲಾಗುತ್ತಿದೆ.

ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಭಾಗ್ಯಲಕ್ಷ್ಮಿ ಬಾಂಡ್ ವಿತರಣೆಯಾಗಿಲ್ಲ. ಇವತ್ತಿಗೂ ಕೂಡ ತಾಯಂದಿರು ನಮ್ಮ ಕಛೇರಿಗೆ ಬಂದು ಈ ಬಗ್ಗೆ ಕೇಳುತ್ತಿದ್ದಾರೆ. ಬಿ.ಪಿ.ಎಲ್. ಕಾರ್ಡ್‌ನವರಿಗೂ ಕೊಡುತ್ತಿಲ್ಲ. ಈಗಾಗಲೇ ಏನು ಬಾಂಡ್‌ಗೆ ಅರ್ಜಿ ಕೊಟ್ಟಿದ್ದಾರೋ, ಅವರಿಗೂ ಕೂಡ ಹಣ ವಿತರಣೆಯಾಗುತ್ತಿಲ್ಲ. ನನಗೆ ಬಹಳ ನೋವಾಗತಕ್ಕದ್ದು ಏನೆಂದರೆ,

ಹಣ ಕೊಡಲಿಕ್ಕೆ ಆಗದಿದ್ದ ಮೇಲೆ, ಇಂತಹ ಯೋಜನೆಗಳನ್ನೇ ರೂಪಿಸ ಬಾರದು. ಎಲ್ಲಾ ಹೆಣ್ಣುಮಕ್ಕಳು ಹೆರಿಗೆಯಾದ ತಕ್ಷಣ ಕಳೆದ 8–9 ತಿಂಗಳಿನಿಂದ ನಮ್ಮ ಕಛೇರಿಗೆ ಓಡಾಡುತ್ತಿದ್ದಾರೆ. ಯಾರಿಗೂ ಕೂಡ ಬಾಂಡ್ ವಿತರಿಸಿಲ್ಲ. BPL card ಕೊಟ್ಟವರಿಗೂ ಬಾಂಡ್ ವಿತರಣೆ ಮಾಡಿಲ್ಲ. ಈಗ ಅರ್ಜಿಯನ್ನೇ ಸ್ವೀಕರಿಸುವುದಿಲ್ಲ ಎಂದು ಹೇಳುತ್ತಿದ್ದಾರೆ. ಇಲ್ಲಿ ಏನಾಗಿದೆ? ಅರ್ಜಿಯನ್ನು ಏಕೆ ಸ್ವೀಕರಿಸುತ್ತಿಲ್ಲ ಎಂದು ನಮಗೆ ಅರ್ಥವಾಗುತ್ತಿಲ್ಲ. ಏತಕ್ಕಾಗಿ ಇಂತಹ ಯೋಜನೆಗಳನ್ನು ಮಾಡಬೇಕು? ಸುಮ್ಮನೆ ಅವರು ಶಾಸಕರ ಕಛೇರಿಗೆ ಓಡಾಡುತ್ತಿದ್ದಾರೆ.

ಶ್ರೀ ಸಿ.ಸಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, 2009–10ವರೆಗೆ ಮಾನ್ಯ ಸದಸ್ಯರ ಕ್ಷೇತ್ರದ ತಾಲ್ಲೂಕಿನಲ್ಲಿ ಕೇವಲ 145 ಭಾಗ್ಯಲಕ್ಷ್ಮಿ ಬಾಂಡ್‌ಗಳನ್ನು ನಾವು ವಿತರಣೆ ಮಾಡಬೇಕಾಗಿದೆ. ಈಗಾಗಲೇ 2009–10ನೇ ಸಾಲಿಗೆ ಸಂಪೂರ್ಣವಾಗಿ ಭಾಗ್ಯಲಕ್ಷ್ಮಿ ಬಾಂಡುಗಳನ್ನು ವಿತರಣೆ ಮಾಡುವುದಕ್ಕೆ ಬೇಕಾದಷ್ಟು ಹಣ ಸುಮಾರು ರೂ.559 ಕೋಟಿಗಳನ್ನು ಈಗಾಗಲೆ ನಾವು LIC ಬಿಡುಗಡೆ ಮಾಡಿದ್ದೇವೆ. ಭಾಗ್ಯಲಕ್ಷ್ಮಿ ಬಾಂಡಿಗೆ ಹಣಕಾಸಿನ ತೊಂದರೆ ಇದೆ, ಆ ರೀತಿಯ ಯೋಜನೆಯನ್ನು ವಿತಕ್ಕೆ ಮಾಡಬೇಕು ಎನ್ನುವ ಭಾವನೆಯನ್ನು ಮಾನ್ಯ ಸದಸ್ಯರು ತೆಗೆಯಬೇಕು, ಸರ್ಕಾರ ಭಾಗ್ಯಲಕ್ಷ್ಮಿ ಬಾಂಡಿಗೆ ಬೇಕಾದ ಸಂಪೂರ್ಣ ಹಣವನ್ನು ಒದಗಿಸಿ ಕೊಡುತ್ತೇವೆನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಕಿಮ್ಮನೆ ರತ್ನಾಕರ್ : ಬಿಪಿಎಲ್ ಕಾರ್ಡ್ ಸಮೇತ ಎಲ್ಲವನ್ನು ಕೊಟ್ಟಿರುವ ಅರ್ಜಿಗಳಿಗೆ ಇಲ್ಲಿಯವರೆಗೆ ಅವರಿಗೆ ಯಾವುದೇ ರೀತಿಯ ಉತ್ತರ ಸಿಗುತ್ತಿಲ್ಲ, ಟ್ರಜರಿಯಿಂದಲು ಹಣ ಬರುತ್ತಿಲ್ಲ.

ಅಧ್ಯಕ್ಷರು : ತಕ್ಷಣ ಕೊಡುವ ವ್ಯವಸ್ಥೆಯನ್ನು ಮಾಡಿ.

ಶ್ರೀ ಅಪ್ಪಚ್ಚು ರಂಜನ್ : ಮಾನ್ಯ ಅಧ್ಯಕ್ಷರೆ, ಕೆಲವು ಕೂಲಿ ಕಾರ್ಮಿಕರಿಗೆ ಬಿಪಿಎಲ್ ಕಾರ್ಡ್ ಇವತ್ತಿನವರೆಗೆ ಸಿಕ್ಕಿಲ್ಲ, ಅಂಥವರಿಗೂ ಕೂಡ ಆ ಭಾಗ್ಯಲಕ್ಷ್ಮಿ ಯೋಜನೆಯನ್ನು ವಿಸ್ತರಿಸಬೇಕೆಂದು ವಿನಂತಿಸಿ ಕೊಳ್ಳುತ್ತೇನೆ.

ಶ್ರೀ ಡಿ.ಎನ್. ಜೀವರಾಜ್ : ಮಾನ್ಯ ಅಧ್ಯಕ್ಷರೆ, ಕಾಫಿ ತೋಟದ ಕಾರ್ಮಿಕರಿಗೆ ಸರ್ಕಾರ ಬಿಪಿಎಲ್ ಕಾರ್ಡ್ ಎಂದು ಟೆಂಪರವರಿ ಚೀಟಿ ಯನ್ನು ಕೊಟ್ಟಿತ್ತು, ಆ ಚೀಟಿಯನ್ನು ಭಾಗ್ಯಲಕ್ಷ್ಮಿ ಬಾಂಡಿಗೆ ಪರಿಗಣಿಸುತ್ತಿಲ್ಲ,

ಪರ್ಮನೆಂಟ್ ಕಾರ್ಡ್ ಆಗುವವರೆಗೆ ಈಗ ಕೊಟ್ಟಿರುವುದನ್ನು ಇವರು ಮಾನ್ಯ ಮಾಡಬೇಕೆಂದು ಹೇಳುತ್ತಿದ್ದೇನೆ, ಇದು ತಮ್ಮ ಕ್ಷೇತ್ರದಲ್ಲೂ ಇದೆ, ಅದನ್ನು ದಯವಿಟ್ಟು ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಸಿ.ಸಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ಮನೆಯ ಎಲ್ಲಾ ಗೌರವಾನ್ವಿತ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, 31.3.2011 ರವರೆಗೆ ಹುಟ್ಟಿದಂಥ ಎಲ್ಲಾ ಮಕ್ಕಳಿಗೆ ಬಿಪಿಎಲ್ ಕಾರ್ಡ್ ಕಡ್ಡಾಯವಲ್ಲ. ಅದರ ಜೊತೆಗೆ ಹಿಂದಿದ್ದ ಷರತ್ತುಗಳಿಗೆ ಅನ್ವಯವಾಗಿ ಅಂದರೆ, ಅದಾಯ ಪ್ರಮಾಣ ಪತ್ರವಿರಬಹುದು, ಇತ್ಯಾದಿಯಾಗಿ ಹಿಂದಿನ ಸುತ್ತೋಲೆ ಏನಿತ್ತು, ಆ ಸುತ್ತೋಲೆಯ ಪ್ರಕಾರ ನಾವು ಭಾಗ್ಯಲಕ್ಷ್ಮಿ ಬಾಂಡುಗಳನ್ನು ವಿತರಣೆ ಮಾಡುತ್ತೇವೆ.

ಅಧ್ಯಕ್ಷರು : ಬ್ಯಾಲೆನ್ಸ್ ಇದ್ದದ್ದನ್ನು ಏಕೆ ಕೊಟ್ಟಿಲ್ಲ ಎನ್ನುವುದು ಅವರ ಪ್ರಶ್ನೆ, ಯಾವಾಗ ಕೊಡುತ್ತೀರೆಂದು ಹೇಳಿ.

ಶ್ರೀ ಸಿ.ಸಿ. ಪಾಟೀಲ್ : 2009–10ರವರೆಗೆ 145 ಭಾಗ್ಯಲಕ್ಷ್ಮಿ ಅರ್ಜಿಗಳು ಬಾಕಿ ಇವೆ, ಅದಕ್ಕೆ ಈಗಾಗಲೇ ಸರ್ಕಾರದಿಂದ ಹಣವನ್ನು ತುಂಬಲಾಗಿದೆ, ಸಾಧ್ಯವಾದಷ್ಟು ಬೇಗ ಅದನ್ನು ಒದಗಿಸಿಕೊಡುತ್ತೇವೆ.

ಭಾಗ್ಯಲಕ್ಷ್ಮಿ ಯೋಜನೆಯಡಿ ವಿತರಿಸಲಾದ ಬಾಂಡುಗಳು

107 (1050) ಶ್ರೀಮತಿ ಅನಿತಾ ಕುಮಾರಸ್ವಾಮಿ (ಮಧುಗಿರಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದೆರೆಡು ವರ್ಷಗಳಿಂದ ರಾಜ್ಯದಲ್ಲಿ ಭಾಗ್ಯಲಕ್ಷ್ಮಿ ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ನೀಡಲಾದ ಬಾಂಡುಗಳೆಷ್ಟು (ವಿಧಾನ ಸಭಾವಾರು ಮಾಹಿತಿ ನೀಡುವುದು);

ಆ) ಭಾಗ್ಯಲಕ್ಷ್ಮಿ ಯೋಜನೆಯಡಿ ಪ್ರತಿ ವರ್ಷ ಗುರುತಿಸಲಾಗಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; ಫಲಾನುಭವಿಗಳನ್ನು ಗುರುತಿಸಲಿರುವ ಮಾನದಂಡಗಳೇನು (ಮಾಹಿತಿ ನೀಡುವುದು)?

ಶ್ರೀ ಸಿ.ಸಿ. ಪಾಟೀಲ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಕಳೆದೆರೆಡು ವರ್ಷಗಳಲ್ಲಿ ಒಟ್ಟು 3,06,707 ಬಾಂಡ್ ನೀಡಲಾಗಿದೆ. ಕೆಲವು ತಾಲ್ಲೂಕುಗಳು 2 ಕ್ಕಿಂತ ಹೆಚ್ಚು ವಿಧಾನಸಭಾ ಕ್ಷೇತ್ರಕ್ಕೆ ಒಳಪಟ್ಟಿರುತ್ತವೆ. ಈ ಕಾರಣದಿಂದಾಗಿ ಇಲಾಖೆಯಲ್ಲಿ ಬಾಂಡ್ ಪಡೆದ